**ಸಾಕ್ಷಿಗೆ ದಿನಾಂಕ : *09-01-2026* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು*: 1* ರಿಂದ *5* ಮತ್ತು *7* ನೇ ಪ್ರತಿವಾದಿಯರ ಪರ ಶ್ರೀ . ಎಮ್. ಬಿ. ಹೆಚ್ ವಕೀಲರಿಂದಃ**

ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ನಾನು ನೀಡಿರುತ್ತೇನೆ. ಮಹಾಂತಗೌಡ ರವರಿಗೆ 7 ಜನ ಮಕ್ಕಳು ಇರುತ್ತಾರೆ. ಅವರೆಂದರೆ, ಶಾಂತಾ, ಬಸವರಾಜ, ಅನುಸೂಯಾ, ಸುವರ್ಣಾ, ಬಸಮ್ಮ, ಶಿವನಗೌಡ ಮತ್ತು ಸಂಗನಗೌಡ. ನನ್ನ ಮದುವೆಯಾಗಿ 32 ವರ್ಷಗಳಾಯಿತು. ನನ್ನನ್ನು ಬದಾಮಿ ತಾಲೂಕಿನ ಬಿರನೂರ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ. ನಮ್ಮ ಮನೆತನಕ್ಕೆ ಒಟ್ಟು 6 ಎಕರೆ 6 ಗುಂಟೆ ಆಸ್ತಿ ಇತ್ತು. ಸರ್ವೆ ನಂ.53/2 ಎ 2 ಬಿ ಇದು ನಮ್ಮ ತಂದೆಯವರ ಹೆಸರಿನಲ್ಲಿ ಇತ್ತು. ಸದರಿ ಜಮೀನು ಮುಳುಗಡೆಯಾಗಿರುತ್ತದೆ. ಸರ್ವೆ ನಂ.52, 54/2 ಮತ್ತು 204/1 ಈ ಆಸ್ತಿಗಳು ನನ್ನ ತಾಯಿಯ ತವರು ಮನೆಯ ಆಸ್ತಿಗಳು. ಸರ್ವೆ ನಂ.52 ಕೂಡಾ ಮುಳುಗಡೆಯಾಗಿರುತ್ತದೆ. ಸರ್ವೆ ನಂ.54/2 ಕೂಡಾ ಮುಳುಗಡೆಯಾಗಿರುತ್ತದೆ. ಸರ್ವೆ ನಂ.204/1 ರಲ್ಲಿ 4 ಎಕರೆ 5 ಗುಂಟೆ ಕ್ಷೇತ್ರ ಇದ್ದು, ಈಗ 22 ಗುಂಟೆ ಬಿಟ್ಟು ಉಳಿದ ಜಮೀನು ನಾರಾಯಣಪೂರ ಹಿನ್ನಿರಿನಲ್ಲಿ ಮುಳುಗಡೆಯಾಗಿರುತ್ತದೆ. ನನ್ನ ತಂದೆಯವರು ದಿನಾಂಕ: 22.12.2012 ರಂದು ತೀರಿಕೊಂಡಿರುತ್ತಾರೆ. ನಾನು ಇದ್ದಲಗಿ ಗ್ರಾಮಕ್ಕೆ ತಂದೆಯವರು ಆಗಾಗ ಹೋಗುತ್ತಿದ್ದೆ. ಅವರು ತೀರಿಕೊಂಡ ನಂತರ ಸ್ವಲ್ಪ ಕಡಿಮೆಯಾಗಿರುತ್ತದೆ. 2020 ರಿಂದ ಇದ್ದಲಗಿ ಗ್ರಾಮಕ್ಕೆ ಹೋಗುವುದು ಕಡಿಮೆಯಾಗಿರುತ್ತದೆ. ಸರ್ವೆ ನಂ.52 ಇದು ನನ್ನ ತಾಯಿಯ ಸ್ತ್ರೀಧನ ಆಸ್ತಿಯಾಗಿದ್ದು ಅದು ಅವರ ಸ್ವಂತ ಆಸ್ತಿಯಾಗಿರುತ್ತದೆ. ಅದು ನನ್ನ ತಾಯಿಯ ಸ್ವಂತ ಆಸ್ತಿಯಾಗಿದ್ದರಿಂದ ಅದನ್ನು ಯಾರಿಗಾದರು ಅವರು ಕೊಡಬಹುದು. ಬಕ್ಷಿಸ್ ಪತ್ರವನ್ನು ನನ್ನ ತಾಯಿಯವರು ಮಾಡುವಾಗ ನನಗೆ ಕೇಳಿದರೆ ನಾನು ಒಪ್ಪಿಗೆ ಕೊಡುತ್ತಿದ್ದೆ. ಬಕ್ಷಿಸ್ ಪತ್ರ ಮಾಡಿದ ಎರಡು ಮೂರು ತಿಂಗಳುಗಳ ನಂತರ ನನ್ನ ತಾಯಿ ತೀರಿಕೊಂಡಿರುತ್ತಾರೆ. ಸರ್ವೆ

ನಂ.53/2 ಎ 2 ಬಿ ಈ ಜಮೀನು ಮುಳುಗಡೆಯಾಗಿದ್ದು, ಅದರ ಪರಿಹಾರದ ಹಣಕ್ಕೋಸ್ಕರ ವಾದಿ ಮತ್ತು ಪ್ರತಿವಾದಿಯರು ನನ್ನ ತಾಯಿಗೆ ಅಧಿಕಾರ ಪತ್ರವನ್ನು ಕೊಟ್ಟಿದ್ದೇವು ಎಂದರೆ ಸರಿ. ಬ್ಯಾಂಕಿನಲ್ಲಿರುವ ಪರಿಹಾರದ ಹಣದಲ್ಲಿ ನನಗೆ 1/7 ಭಾಗ ಇರುತ್ತದೆ. ನನ್ನ ತಾಯಿಯವರು ಬಕ್ಷಿಸ್ ಪತ್ರ ಮಾಡುವಾಗ ಇದ್ದಲಗಿ ಗ್ರಾಮದಲ್ಲಿ ಆರಾಮವಾಗಿ ಇದ್ದರು. ಬಕ್ಷಿಸ್ ಪತ್ರವನ್ನು ನನಗೆ ಹೇಳದೇ ಮಾಡಿರುವುದರಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.